ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	919
ಉತ್ತರಿಸಬೇಕಾದ ದಿನಾಂಕ	11.03.2026
ಉತ್ತರಿಸಬೇಕಾದ ಸಚಿವರು	ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	2023-24, 2024-25, 2025-26 ಸಾಲಿನಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಎಷ್ಟು ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ;	ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಕೆಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯೊಂದಿಗೆ ಸಮನ್ವಯಗೊಳಿಸಿ ರಾಜ್ಯಾದ್ಯಂತ ನಗರ/ಪಟ್ಟಣ ವ್ಯಾಪ್ತಿಯಲ್ಲಿನ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕೊಳಗೇರಿ ನಿವಾಸಿಗಳಿಗೆ 2016-17ನೇ ಸಾಲಿನಿಂದ 2018-19ನೇ ಸಾಲಿನವರೆಗೆ ವಿವಿಧ ಹಂತಗಳಲ್ಲಿ ಒಟ್ಟು 1,80,253 (AHP) ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ದೊರತ್ತಿರುತ್ತದೆ. ಈ ಪೈಕಿ 176122 ಮನೆಗಳ ವಿವಿಧ ಹಂತಗಳಲ್ಲಿದ್ದು, ಪೂರ್ಣಗೊಂಡ ಮನೆಗಳ ಪೈಕಿ ಪ್ರಥಮ ಹಂತದಲ್ಲಿ ಮಾರ್ಚ್-2024ರಂದು 36,789 ಮನೆಗಳನ್ನು ಹಾಗೂ 2ನೇ ಹಂತದಲ್ಲಿ 42,345 ಮನೆಗಳನ್ನು ದಿನಾಂಕ:24.01.2026ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳ ಅಮೃತ ಹಸ್ತದಿಂದ ಲೋಕಾರ್ಪಣೆ ಮಾಡಿ ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿರುತ್ತದೆ.
(ಆ)	ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ನಿರ್ಮಿಸಿರುವ ಮನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನ ಎಷ್ಟು?	ಸರ್ಕಾರದ ಆದೇಶ ಸಂಖ್ಯೆ:ವಇ 148 ಹೆಚ್‌ಎಫ್‌ಎ 2023, ದಿನಾಂಕ:30.12.2023ರಂತೆ ಮನೆಗಳ ಫಲಾನುಭವಿಗಳಿಂದ ಪ್ರತಿ ಮನೆಗೆ ಗರಿಷ್ಠ ರೂ. 1.00 ಲಕ್ಷಗಳ ಫಲಾನುಭವಿ ವಂತಿಕೆ ಪಾವತಿಸಿಕೊಂಡು ಉಳಿದ ಮೊತ್ತವನ್ನು ಸರ್ಕಾರದಿಂದ ಭರಿಸಲು ಆದೇಶಿಸಲಾಗಿರುತ್ತದೆ. (ರೂ.ಲಕ್ಷಗಳಲ್ಲಿ)

ಮನೆಗಳ ಸರಾಸರಿ ಘಟಕ ವೆಚ್ಚ	ಕೇಂದ್ರ ಸರ್ಕಾರದ ಸಹಾಯದನ	ರಾಜ್ಯ ಸರ್ಕಾರದ ಸಹಾಯದನ		ಫಲಾನುಭವಿ ವಂತಿಕೆ	
		ಪರಿಶಿಷ್ಟ ಜಾತಿ/ ಪಂಗಡ	ಇತರೇ ವರ್ಗ	ಫಲಾನುಭವಿಗಳು ಭರಿಸಬೇಕಾದ ಮೊತ್ತ	ರಾಜ್ಯ ಸರ್ಕಾರ
6.74	1.50	2.00	1.20	1.00	2.24(SC/ST) 3.04(Others)

ಸಂಖ್ಯೆ: ವಇ 38 ಹೆಚ್‌ಎಫ್‌ಎ 2026]

(ಬಿ.ಝೆಡ್ ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.